**ಓ.ಎಸ್-88/2021** **ಡಿ.ಡಬ್ಲ್ಯೂ-1 (ಜೀವನ್)**

ದಿನಾಂಕಃ **06.01.2025** ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರೆದ ಪಾಟೀ ಸವಾಲು : ವಾದಿ ಪರ ಶ್ರೀ. ಕೆ.ಎಸ್.ಎನ್. ವಕೀಲರಿಂದ :**

**1.** ನನ್ನ ತಾತ ಬದುಕಿದ್ದಾಗ, ನನ್ನ ತಾತ ಮತ್ತು ನನ್ನ ಮಾವಂದಿರು ಸೇರಿ ಏನೇನು ವ್ಯವಹಾರ ಮಾಡಿದ್ದರೆಂದು ನನಗೆ ಗೊತ್ತಿಲ್ಲ. ಪಾಲಹಳ್ಳಿಯಲ್ಲಿರುವ Community Hall ನ್ನು 2000 ನೇ ಇಸವಿಯಲ್ಲಿ ಕಟ್ಟಿರಬಹುದು. ಸದರಿ Community Hall ನ್ನು ನಿರ್ಮಾಣ ಮಾಡಲು ಕೈಗಡ, KSFC ಯಲ್ಲಿ ಸಾಲ ತೆಗೆದುಕೊಂಡಿದ್ದರು. KSFC ಯಲ್ಲಿ ನನ್ನ ತಾತ ಹಾಗೂ ಮಾವಂದಿರು ತೆಗೆದುಕೊಂಡಿದ್ದ ಸದರಿ ಸಾಲವನ್ನು ನಿಪಿ-17 ರ ದಾಖಲೆಯಂತೆ ನನ್ನ ತಾತ, ಅಜ್ಜಿ ಹಾಗೂ ಅವರ ಮಕ್ಕಳು ತೀರುವಳಿ ಮಾಡಿರುತ್ತಾರೆಂದರೆ ಸರಿ. ಪಾಲಹಳ್ಳಿ

ಗ್ರಾಮದ ಸಿದ್ದೇಗೌಡರ ಮಗ ರಾಮಚಂದ್ರು ನನಗೆ ಗೊತ್ತಿಲ್ಲ. ನನಗೆ ಕನ್ನಡ ಓದಲು ಬರುತ್ತದೆ. ನನ್ನ ತಾತ ಹಾಗೂ ಮಾವಂದಿರು ಸೇರಿಕೊಂಡು ಸಾಲ ಪಡೆದು, ನಿಪಿ-21 ರಂತೆ ಒಂದು ಕ್ರಯದ ಕರಾರುಪತ್ರವನ್ನು ಬರೆದುಕೊಟ್ಟಿದ್ದರು ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಸದರಿ ದಾಖಲೆಯಲ್ಲಿ ಬೋರಯ್ಯ ಮತ್ತು ಅವರ ಮಕ್ಕಳು ಸೇರಿ ಬರೆದುಕೊಟ್ಟಿರುತ್ತಾರೆಂದು ಒಕ್ಕಣಿಕೆ ಇರುವುದನ್ನು ನಾನು ಓದಿ ತಿಳಿದುಕೊಂಡಿಲ್ಲ. ನಂತರ ಸದರಿ ಸಾಲ ತೀರುವಳಿ ಆದ ನಂತರ ನಿಪಿ-22 ರ ದಾಖಲೆಯಂತೆ ಕ್ರಯದ ಕರಾರುಪತ್ರವನ್ನು ರದ್ದುಪಡಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ.

**2.** ನನ್ನ ಮಾವ ವಾದಿ ಮಂಜುನಾಥ್‌ರವರು PWD Contract ಕೆಲಸ ಮಾಡಿಸುತ್ತಿದ್ದರು ಎಂದರೆ ಸುಳ್ಳು. ಸಾಕ್ಷಿಯು ವಾದಿಗೆ ಸೇರಿದ ಗುತ್ತಿಗೆದಾರರ ಪಾಸ್ ಪುಸ್ತಕವನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-24** ಎಂದು ಗುರುತಿಸಲಾಯಿತು. ಸಾಕ್ಷಿಯು 2005-06 ನೇ ಸಾಲಿನ ಸಂಪೂರ್ಣ ಗ್ರಾಮೀಣ ರೋಜ್‌ಗಾರ್ ಯೋಜನೆಯಡಿ ಕಾಮಗಾರಿಗಳ ಕ್ರಿಯಾ ಯೋಜನೆಯ ದಾಖಲೆಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-25** ಎಂದು ಗುರುತಿಸಲಾಯಿತು. ಸಾಕ್ಷಿಯು ತನ್ನ ತಾತನ ಕಣ್ಣಿನ ಶಸ್ತ್ರ ಚಿಕಿತ್ಸೆಯಾಗಿ ಆಸ್ಪತ್ರೆಯಿಂದ ಬಿಡುಗಡೆಯಾದ ದಿನಾಂಕಃ 12.02.2021 ರ Discharge Summary ಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು **ನಿಪಿ-26** ಎಂದು ಗುರುತಿಸಲಾಯಿತು. ಚೌಲ್ಟರಿಯನ್ನು ಕಟ್ಟುವ ಪೂರ್ವದಲ್ಲಿ ನನ್ನ ತಾತನ ಕುಟುಂಬದಲ್ಲಿ ವಿಭಾಗವಾಗಿತ್ತು ಅಥವಾ ನಂತರದಲ್ಲಿ ವಿಭಾಗವಾಗಿತ್ತು ಎನ್ನುವ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಖರವಾಗಿ ಯಾವ ದಿನಾಂಕದಂದು, ಯಾವ ದಾಖಲೆಯ ಮುಖಾಂತರ ವಿಭಾಗವಾಗಿತ್ತು ಎಂದು ತೋರಿಸಲು ದಾಖಲೆ ಇರುವುದಿಲ್ಲ. ನಿಡಿ-1 ಕ್ಕೆ ಸಾಕ್ಷಿದಾರರಾಗಿ ಸಹಿ ಮಾಡಿರುವವರು ನವೀನ್ ಕುಮಾರ್ ಮತ್ತು ಜೀವನ್‌ರವರಿರುತ್ತಾರೆ. ಅವರು ರಾಮನಗರ ಜಿಲ್ಲೆ, ಬಿಡದಿ ಗ್ರಾಮದವರಾಗಿರುತ್ತಾರೆ. ನಿಡಿ-2 ರಲ್ಲಿ ಯಾವುದೇ ವ್ಯಕ್ತಿಗೆ 40 ಲಕ್ಷ ಹಣ ನೀಡಿದ ಬಗ್ಗೆ ಯಾವುದೇ ಉಲ್ಲೇಖ ಇರುವುದಿಲ್ಲ. ನಿಡಿ-5 ದಾನಪತ್ರಕ್ಕೆ ರಾಂಪುರದ

ಬಸವರಾಜು ಹಾಗೂ ಮಂಡ್ಯದ ಶಂಕರ್ ಎನ್ನುವವರು ಸಾಕ್ಷಿದಾರರಾಗಿ ಸಹಿ ಮಾಡಿರುತ್ತಾರೆ. ಪಾಲಹಳ್ಳಿ ಗ್ರಾಮದ ವ್ಯಕ್ತಿಗಳಿಗೂ, ನನಗೂ ಯಾವುದೇ ದ್ವೇಷವಿಲ್ಲ. ನನ್ನ ತಾತ ಹಾಗೂ ಮಾವಂದಿರನ್ನು ನೋಡಿದ ಪಾಲಹಳ್ಳಿ ಗ್ರಾಮದ ವ್ಯಕ್ತಿಗಳು ವಿಲ್ ಮತ್ತು ದಾನಪತ್ರಕ್ಕೆ ಸಹಿ ಮಾಡಿರುವುದಿಲ್ಲ. ನಾನು ನನ್ನ ಪ್ರಭಾವವನ್ನು ಬಳಸಿ ಬಿಡದಿ, ಮಂಡ್ಯ ಹಾಗೂ ರಾಂಪುರದಿಂದ ವ್ಯಕ್ತಿಗಳನ್ನು ಕರೆದುಕೊಂಡು ಬಂದು ನಿಡಿ-1 ಮತ್ತು 5 ಕ್ಕೆ ಸಹಿ ಮಾಡಿಸಿ ದಾಖಲೆಗಳನ್ನು ಸೃಷ್ಟಿಸಿಕೊಂಡಿದ್ದೇನೆ ಎಂದರೆ ಸುಳ್ಳು.

**ಮರು ವಿಚಾರಣೆ : ಇಲ್ಲ.**

(ನನ್ನ ಉಕ್ತಲೇಖನದ ಮೇರೆಗೆ ತೆರೆದ ನ್ಯಾಯಾಲಯದಲ್ಲಿ ಈ ದಿನ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೇ ಸ ಇ**

**ಅಪರ ಹಿರಿಯ ಸಿಜೆ, ಶ್ರೀರಂಗಪಟ್ಟಣ.**

**ಸಾಕ್ಷಿದಾರರ ಸಹಿ.**